ಹಿರಣ್ಯಕಶಿಪುವಿಗೆ ತಾನೇ ಜಗತ್ತಿಗೆಲ್ಲ ದೊಡ್ಡವನು, ದೇವರು ಏನು ಮಹಾ ಎಂಬ ತಿರಸ್ಕಾರ. ಅವನಿಗೆ ಪ್ರಹ್ಲಾದನಂಥ ದೈವಭಕ್ತ ಮಗ! ಅಣ್ಣ ಹಿರಣ್ಯಾಕ್ಷನ ವಧೆ ಆದಮೇಲಂತೂ ಕಶಿಪು ಇನ್ನಷ್ಟು ಕ್ರುದ್ಧನಾದ. ಹಾಗೆಂದು ತಾನು ತಪಸ್ಸು ಮಾಡಿ ದೇವರಲ್ಲಿ ವರ ಪಡೆದವನೇ. ಅದೂ ಎಂಥ ವರ! ತನ್ನನ್ನು ಹಗಲಲ್ಲಿ ಕೊಲ್ಲಬಾರದು, ರಾತ್ರಿಯಲ್ಲಿ ಕೊಲ್ಲಬಾರದು; ಮನುಷ್ಯ ಕೊಲ್ಲಬಾರದು, ಪ್ರಾಣಿ ಕೊಲ್ಲಬಾರದು; ಮನೆ ಒಳಗೂ ಸಾವು ಬರಬಾರದು, ಹೊರಗೂ ಸಾವು ಬರಬಾರದು. ಯಾವುದೇ ಅಸ್ತ್ರ, ಶಸ್ತ್ರದಿಂದ ತನ್ನನ್ನು ಕೊಲ್ಲಬಾರದು. ಹೀಗೆ, ತನ್ನ ಸಾವಿಗೆ ಎಲ್ಲೆಡೆಯಿಂದ ಪ್ರತಿಬಂಧನ ತಂದುಕೊಂಡಿದ್ದೇನೆಂದೇ ಭಾವಿಸಿದ. ಇಡೀ ಕಥೆ ಅಪ್ಪ ಎಷ್ಟೋ ಸಲ ನನಗೆ ಹೇಳಿದ್ದಾರೆ, ನಾನು ನನ್ನ ಮಗನಿಗೆ ಹೇಳಿದ್ದೇನೆ. ಕೇಳುತ್ತ, ಹೇಳುತ್ತ ಇತ್ತೀಚೆಗೆ ಏನೇನೋ ಅರ್ಥಗಳು ಹೊಳೆಯುತ್ತಿವೆ. ಎಲ್ಲ ಕಡೆಯಿಂದ ತಮ್ಮನ್ನು ಸಾವಿನಿಂದ ರಕ್ಷಿಸಿಕೊಳ್ಳುವ ಪ್ರಯತ್ನ, ತಪ್ಪೇನಲ್ಲ. ಆದರೆ, ಸಾವೇ ಬರಬಾರದು ಎಂದರೆ ಆದೀತೆ? ಸಾವು ಯಾರಿಗಾದರೂ ತಪ್ಪಿತೆ? ಮೃತ್ಯುವನ್ನು ಗೆಲ್ಲುವ, ಅಲ್ಲಲ್ಲ ಮೃತ್ಯುವನ್ನೇ ನಿರಾಕರಿಸುವ ಈ ಹಪಾಹಿತನ ಎಂಥದಿದ್ದೀತು? ಸಕಲ ಭೋಗ, ಭಾಗ್ಯಗಳನ್ನು ಅನುಭವಿಸುತ್ತ ಈ ಭೂಮಿಯಲ್ಲೇ ಶಾಶ್ವತವಾಗಿ ಇದ್ದುಬಿಡುವ ಆಸೆ. ಸ್ವಾಮಿ ನರಸಿಂಹನಾಗಿ ಬಂದು ಮಾನವರಿಗೆ ಕೊಟ್ಟು ಹೋದ ಸಂದೇಶ ಇಷ್ಟೆ: ಎಂಥ ಮಾತಿನ ಪ್ರತಿಬಂಧನಕ್ಕಿಂತ ಸಾವು ಹೆಚ್ಚು ಸತ್ಯವಾದುದು. ಅದು ಎಲ್ಲಿಂದಲೂ, ಹೇಗೂ ಪ್ರವೇಶಿಸಬಹುದು. ಭೂಮಿಯಲ್ಲಿ ಅಲ್ಲ, ಆಕಾಶದಲ್ಲಿ ಅಲ್ಲ ಎಂದರೆ ಸಾವು ದೇವರ ತೊಡೆಯ ಮೇಲೇ ಬರಬಹುದು. ಈಗ ಕಾಯುವವರು ಯಾರು?

ಈ ಕಥೆಗಳು ಅದೆಷ್ಟು ಚಂದ! ಅಂಥ ರಾಕ್ಷಸನಿಗೊಬ್ಬ ಪ್ರಹ್ಲಾದನಂಥ ಮಗ ಹುಟ್ಟಿ ತಂದೆಯ ತಪ್ಪನ್ನು ತಿದ್ದಲೆತ್ನಿಸುತ್ತಾನೆ. ಯಾರ ಮಾತನ್ನೂ ಕೇಳದವನಿಗೆ ಮಗನಾಗಿ ಬಂದು ತಿಳಿ ಹೇಳುವ ಯತ್ನವೆ, ಉದ್ಧರಿಸುವ ಯತ್ನವೆ – ದೇವರದು? ಎಲ್ಲಿಯೂ ದೇವರಿಲ್ಲ ಎಂದು ಅಪ್ಪ ಹೇಳಿದರೆ ಎಲ್ಲೆಲ್ಲೂ ದೇವರು ಎನ್ನುತ್ತಾನೆ ಪ್ರಹ್ಲಾದ. ಮಗನನ್ನು ಕೊಲ್ಲಲು ಹೊರಟ ಅಪ್ಪ, ಅಪ್ಪನನ್ನು ಕೊಲ್ಲಲು ಬಂದ ದೇವರು! ನನ್ನ ಮಗನ ಹೆಸರೂ ಪ್ರಹ್ಲಾದನೇ. ನಾನು ಹಿರಣ್ಯಕಶಿಪು ಅಲ್ಲ, ಮತ್ತೆ! ಚಿಕ್ಕವನಿದ್ದಾಗ ಅದೆಷ್ಟು ಸಲ ಈ ಕಥೆ ಕೇಳಿದರೂ ಮತ್ತೆ ಮತ್ತೆ ಕೇಳುವ ಆಸೆ ನನ್ನ ಮಗನಿಗೆ.

"ಅಪ್ಪಾ, ಅಪ್ಪನೇ ಮಗನನ್ನು ಕೊಲ್ಲಲು ಹೀಗೆಲ್ಲ ಯತ್ನಿಸಬಹುದೇ?"

"ತಾಯಿ ಕಯಾದುವೂ ಏನೂ ಮಾಡಲಾಗಲಿಲ್ಲವೇ?"

"ಅಪ್ಪ ಸತ್ತಾಗ ಪ್ರಹ್ಲಾದನಿಗೆ ಅಳು ಬರಲಿಲ್ಲವೇ? ದೇವರಿಗೆ ಬೇಡಿಕೊಂಡು ಅಪ್ಪನನ್ನು ಬದುಕಿಸಬಹುದಿತ್ತಲ್ಲ!"

ಹೀಗೆ ಏನೇನೋ ಪ್ರಶ್ನೆಗಳು. ಮಕ್ಕಳ ಸಮಾಧಾನಕ್ಕೆ ನಾವೇನೋ ಉತ್ತರ ಹೇಳುವುದು. ಇವನ್ನೆಲ್ಲ ನೆನೆಸಿಕೊಳ್ಳುತ್ತಿರುವುದಕ್ಕೆ ಕಾರಣವಿದೆ. ನನ್ನ ಮಗ ಪ್ರಹ್ಲಾದ ಓದುವುದರಲ್ಲಿ ಜಾಣ. ಎಷ್ಟೆಂದರೂ ನನ್ನ ಮಗ! ನಾನು ಚೆನ್ನಾಗಿ ಓದುತ್ತಿದ್ದೆ ಎಂದು ತಾನೆ ಅಪ್ಪ ನನ್ನನ್ನು ಮುಂದಕ್ಕೆ ಓದಿಸಿದ್ದು! ಹಾಗೇ ನನ್ನ ಮಗನಿಗೆ ನಾನು ಹೈಸ್ಕೂಲು, ಕಾಲೇಜು ಹತ್ತಿರದ ಹಾಸನದಲ್ಲಿ ಮುಗಿದ ಮೇಲೆ ಎಂ.ಎ. ಮಾಡಲೆಂದು ಮೈಸೂರಿಗೆ ಕಳುಹಿಸಿದೆ. ನಮ್ಮ ಕುಟುಂಬದಲ್ಲಿ ಅವನು ಮೊದಲ ಸ್ನಾತಕೋತ್ತರ ಪದವೀಧರನಾಗಲಿದ್ದ. ಅದು ಮೈಸೂರು ವಿಶ್ವವಿದ್ಯಾಲಯದ ಸುವರ್ಣಯುಗವೆನ್ನಬೇಕು. ಅಂಥ ಪ್ರಾಧ್ಯಾಪಕರು ಅಲ್ಲಿದ್ದರು. ಪ್ರಹ್ಲಾದ ಸೇರಿದ್ದು ಕನ್ನಡ ಎಂ.ಎ. ಓದಲೆಂದು. ಅವನಿಗೆ ಒಂದು ರೂಮು ಮಾಡಿಕೊಟ್ಟು, ಅಡಿಗೆ ಮಾಡಿಕೊಳ್ಳಲು ಸೌಕರ್ಯಗಳನ್ನು ಏರ್ಪಡಿಸಿ "ಚೆನ್ನಾಗಿ ಓದಪ್ಪ" ಎಂದು ಆಶೀರ್ವದಿಸಿದೆ. ಇಬ್ಬರಿಗೂ ಕಣ್ಣಲ್ಲಿ ನೀರಾಡಿತು. ಈವರೆಗೂ ಒಬ್ಬರನ್ನೊಬ್ಬರು ಅಗಲಿದ್ದವರಲ್ಲ. ಶಾಂತಾ ಕೂಡ ಊರಿಂದ ಬರುವಾಗ ಕಣ್ಣೀರಿಟ್ಟಿದ್ದಳು. "ಮಗನನ್ನು ನಮ್ಮ ಕಣ್ಣೆದುರೇ ಇಟುಕೊಳ್ಳುತ್ತೇವೆ ಅಂದರೆ ಆಗುತ್ತದೆಯೇ? ಬಾಳಿ ಬದುಕಬೇಕಾದವರು. ಮುಂದಿನ